# ತುರ್ತು ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

ದಿನಾಂಕ: 21-06-2022 ರಂದು ಬೆಳಿಗ್ಗೆ 11.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದಲ್ಲಿ ತುರ್ತು ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

## ತುರ್ತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಪಾರ್ವತಿ ಸಿ. ಎಸ್. ಡೀನರು | ಸದಸ್ಯರು |
| 3. | ಪ್ರೊ. ಪಿ. ಭಾಸ್ಕರ್, ಡೀನರು | ಸದಸ್ಯರು |
| 4. | ಪ್ರೊ. ನುಸ್ರತ್ ಫಾತಿಮಾ, ಡೀನರು | ಸದಸ್ಯರು |
| 5. | ಡಾ. ಇಕ್ಬಾಲ್ ಶೇಖ್, | ಸದಸ್ಯರು |
| 6. | ಶ್ರೀ. ಬಸವರಾಜ ವಾಯ್., | ಸದಸ್ಯರು (ಆನ್‌ಲೈನ್ ಮುಖಾಂತರ ಸಭೆಗೆ ಹಾಜರಿದ್ದರು). |
| 7. | ಡಾ. ಎ.ಆರ್. ಪುರವಂತ, | ಸದಸ್ಯರು |
| 8. | ಶ್ರೀ. ಟಿ. ಶಿವಪ್ರಸಾದ ರಾವ್, | ಸದಸ್ಯರು |
| 9. | ಶ್ರೀ. ಫಾದರ ಜ್ಯೋಷಿ ಪುತ್ತೂರು, | ಸದಸ್ಯರು(ಆನ್‌ಲೈನ್ ಮುಖಾಂತರ ಸಭೆಗೆ ಹಾಜರಿದ್ದರು). |
| 10. | ಶ್ರೀ. ಎನ್. ಸತೀಶ, | ಸದಸ್ಯರು |
| 11. | ಶ್ರೀ. ಕಿಶನ್ ರಾಥೋಡ, | ಸದಸ್ಯರು |
| 12. | ಶ್ರೀ ಪಾಂಡು, | ಸದಸ್ಯರು |
| 13 | ಡಾ. ಮಲ್ಲಿಕಾರ್ಜುನ ಎಂ. ಕುಲಕರ್ಣಿ, | ಸದಸ್ಯರು |
| 14. | ಶ್ರೀ. ಮೊಹ್ಮದ್ ಮುಜಾಕೀರ್ ಅಲಿ, | ಸದಸ್ಯರು |
| 15. | ಗ್ರಂಥಪಾಲಕರು | ಸದಸ್ಯರು |
| 16. | ಹಣಕಾಸು ಅಧಿಕಾರಿಗಳು | ಸದಸ್ಯರು |
| 17. | ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, | ಸದಸ್ಯರು |
| 18 | ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 19. | ಪ್ರೊ. ವಿಶ್ವನಾಥ ಎಂ., ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳನ್ನು ಸ್ವಾಗತಿಸಿ ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಕಲಂ/ಐಟಂ ನಂ. | ವಿಷಯ | ತುರ್ತು ವಿದ್ಯಾವಿಷಯಕ ಪರಿಷತ್ ನಿರ್ಣಯ |
|---|---|---|
| 1 | ರಾಯಚೂರು ವಿಶ್ವವಿದ್ಯಾಲಯದ 2023-24 ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ ( For Affiliation) ಸ್ನಾತಕ, ಸ್ನಾತಕೋತ್ತರ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳ, ಹೊಸ ಕಾಲೇಜು, ಹೊಸ ವಿಷಯ, ಹೊಸ ಕೋರ್ಸು ಪ್ರವೇಶ ಮಿತಿ ಹೆಚ್ಚಳ ಮಂಜೂರಾತಿಗಾಗಿ ಕಾಲೇಜುಗಳು ಆನ್ ಲೈನ್ ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ತುರ್ತಾಗಿ (Urgent) ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಕಳುಹಿಸಿ ಕೊಡುವ ಕುರಿತು | ರಾಯಚೂರು ವಿಶ್ವವಿದ್ಯಾಲಯದ 2023-24 ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ (For Affiliation) ಸ್ನಾತಕ, ಸ್ನಾತಕೋತ್ತರ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳ, ಹೊಸ ಕಾಲೇಜು, ಹೊಸ ವಿಷಯ, ಹೊಸ ಕೋರ್ಸು ಪ್ರವೇಶ ಮಿತಿ ಹೆಚ್ಚಳ ಮಂಜೂರಾತಿಗಾಗಿ ಕಾಲೇಜುಗಳು ಆನ್ ಲೈನ್ ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ಸ್ಥಳೀಯ ತನಿಖಾ ತಂಡವು ಅರ್ಜಿ ಸಲ್ಲಿಸಿದ ಕಾಲೇಜುಗಳಿಗೆ ಭೇಟಿ ನೀಡಿ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಡಾ. ರಾಘವೇಂದ್ರ ಫತ್ತೇಪೂರು, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ಇವರು ಸ್ಥಳೀಯ ತನಿಖಾ ತಂಡವು ನೀಡಿದಂತಹ ವರದಿಯನ್ನು ವಿಸ್ತೃತವಾಗಿ ಸಭೆಯಲ್ಲಿ ಮಂಡಿಸಿದರು. ವಿದ್ಯಾವಿಷಯಕ ಪರಿಷತ್ ಸದಸ್ಯರು ಸರ್ಕಾರಿ ಮಾದರಿ ಸ್ನಾತಕ ಕಾಲೇಜು ಸಿದ್ರಾಂಪೂರ (ರಾಯಚೂರು) ಹಾಗೂ ಶಹಾಪೂರದಲ್ಲಿ ಸ್ಥಾಪಿಸಲ್ಪಟ್ಟಿರುವ ಕಾಲೇಜುಗಳಿಗೆ ಕಡಿಮೆ ಅಂಕ ಬಂದಿರುವುದನ್ನು ಗಮನಿಸಿ ಅದರ ಬಗ್ಗೆ |

| | | |
|---|---|---|
| | | ವಿವರಣೆಯನ್ನು ಕೇಳಿದರು. ಇದಕ್ಕೆ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ಇವರು ಈ ಸರ್ಕಾರಿ ಕಾಲೇಜುಗಳು ಸರ್ಕಾರದ ಮಾರ್ಗ ಸೂಚಿಯಂತೆ ಹೊಸದಾಗಿ ಸ್ಥಾಪನೆಯಾಗಿದ್ದು, ಈ ಸಾಲಿನಿಂದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸಿದ್ದವಾಗಿರುತ್ತವೆ. ಹಾಗೂ ಸರ್ಕಾರಿ ಕಾಲೇಜುಗಳಿಗೆ ಈ ಕನಿಷ್ಠ ಅಂಕಗಳು ದೊರೆಯದಿದ್ದರೂ ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಪ್ರಸ್ತಾವನೆಗಳನ್ನು ಸಲ್ಲಿಸಬೇಕಾಗಿರುತ್ತದೆ ಎಂದು ವಿವರಿಸಿದರು. ಆ ನಂತರ ಸಭೆಯಲ್ಲಿ ಹೊಸ ಕಾಲೇಜುಗಳಿಗೆ ಅನುಮತಿ ಕೇಳಿರುವ 04 ಸಂಸ್ಥೆಗಳಿಗೆ ಸ್ಥಳೀಯ ತನಿಖಾ ತಂಡವು ನೀಡಿರುವ ಶಿಫಾರಸ್ಸನ್ನು ಒಪ್ಪಿ ಅನುಮೋದಿಸಲಾಯಿತು. ಹಾಗೂ ಇನ್ನುಳಿದ 10 ಕಾಲೇಜುಗಳಿಗೆ ಹೊಸ ಕೋರ್ಸು (ಸ್ನಾತಕ/ ಸ್ನಾತಕೋತ್ತರ) ಹಾಗೂ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ ಹೆಚ್ಚಳವನ್ನು ಅನುಮೋದಿಸಲಾಯಿತು. ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಳೀಯ ತನಿಖಾ ತಂಡವು ನೀಡಿದ ವರದಿಯನ್ನು ಅನುಮೋದಿಸಿ ಈ ಅನುಮೋದನೆಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು. |
| **2** | ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳ ಚರ್ಚೆ. | -- |

21/6/23

(ಪ್ರೊ. ವಿಶ್ವನಾಥ ಎಂ.)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

21-6-2023

(ಪ್ರೊ. ಹರೀಶ್ ರಾಮಸ್ವಾಮಿ)
ಕುಲಪತಿಗಳು ಹಾಗೂ ಸಭೆಯ ಅಧ್ಯಕ್ಷರು,
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು